ಕ್ರಿ. ಮಿಸ್.346/2020

**ಪಿ.ಡಬ್ಲ್ಯೂ:2** -ಶ್ರೀ. ಅಂದಪ್ಪ ತಂದೆ ಬಸಪ್ಪ ವಗತಿ , ವಯಸ್ಸುಃ 73 ವರ್ಷ , ಉದ್ಯೋಗಃ ಒಕ್ಕಲುತನ , ಸಾ. ಕೃಷ್ಣಾಪೂರ , ತಾಃ ರೋಣ .

ಸಾಕ್ಷಿಗೆ ದಿನಾಂಕಃ 14-11-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ- ಅರ್ಜಿದಾರರ ಪರ ವಕೀಲರಾದ ಶ್ರೀ. ಎಲ್. ಎನ್. ಬಿ ರವರಿಂದಃ**

**1.** ಎದರುದಾರ ಜಗದೀಶ ನನ್ನ ಮಗ. ಶೃತಿ ನನ್ನ ಮೊಮ್ಮಗಳು (ಮಗಳ ಮಗಳು) ಮತ್ತು ಸೊಸೆ(ಮಗನ ಹೆಂಡತಿ). ದಿಃ 25/04/2016 ರಂದು ಕೃಷ್ಣಾಪೂರ ಗ್ರಾಮದಲ್ಲಿ ನಮ್ಮ ಮನೆಯ ಮುಂದೆ ಅರ್ಜಿದಾರಳು ಮತ್ತು ಎದುರುದಾರನ ಮದುವೆ ಆಯಿತು. ಮದುವೆಯಾದ ನಂತರ 3-4 ತಿಂಗಳು ಇಬ್ಬರು ಚೆನ್ನಾಗಿ ಕೃಷ್ಣಾಪೂರದಲ್ಲಿ ನಮ್ಮ ಮನೆಯಲ್ಲಿ ಸಂಸಾರ ಮಾಡಿದರು. ನಂತರ ಎದುರುದಾರ ವಿನಾ ಕಾರಣ ಅರ್ಜಿದಾರಳೊಂದಿಗೆ ಜಗಳ ಮಾಡುತ್ತಿದ್ದ. ಎದುರುದಾರನಿಗೆ ಅನೈತಿಕ ಸಂಬಂಧ ಇತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಎದರುದಾರ ಅರ್ಜಿದಾರಳಿಗೆ ಅವಳು ಕಪ್ಪು ಇದ್ದಾಳೆಂದು ಹೀಯಾಳಿಸಿ, ಜಗಳ ಮಾಡುತ್ತಿದ್ದ. ಅರ್ಜಿದಾರಳ ವಿರುದ್ಧ ಇಲ್ಲ ಸಲ್ಲದ ಆರೋಪ ಮಾಡುತ್ತಿದ್ದ. ಅರ್ಜಿದಾರಳು ವ್ಯವಿಚಾರಿ ಇದ್ದಾಳೆ ಎಂದು ಇಲ್ಲ ಸಲ್ಲದ ಆರೋಪ ಮಾಡುತ್ತಿದ್ದ. ಆದರೆ ನನ್ನ ಮೊಮ್ಮಗಳು ಆ ರೀತಿ ಯಾವತ್ತೂ ನೆಡೆದುಕೊಂಡಿಲ್ಲ. ಎದರುದಾರ ಮನೆ ಬಿಟ್ಟು ಈಗ 3-4 ವರ್ಷ ಆಗಿದೆ. ಎದುರುದಾರ ರೋಣದಲ್ಲಿ ಇದ್ದಾನೋ ಅಥವಾ ಎಲ್ಲಿ ಇದ್ದಾನೋ ನನಗೆ ಗೊತ್ತಿಲ್ಲ. ಅರ್ಜಿದಾರಳು ಈಗ ನಮ್ಮ ಮನೆಯಲ್ಲಿಯೇ ವಾಸವಾಗಿದ್ದಾಳೆ. ಅರ್ಜಿದಾರಳು ಮತ್ತು ಎದರುದಾರ ನಡುವೆ ಜಗಳ ಬಂದಾಗ ಹಿರಿಯರು ಪಂಚಾಯತಿ ಮಾಡಿ, ನಮಗೆ ವಯಸ್ಸು ಆಗಿದ್ದರಿಂದ ನಮ್ಮನ್ನು ನೋಡಿಕೊಳ್ಳಲು

ಅರ್ಜಿದಾರಳನ್ನು ನಮ್ಮ ಮನೆಯಲ್ಲಿಯೇ ಇರಲು ಹೇಳಿದ್ದರು. ಎದುರುದಾರ ನನಗೆ ಯಾವುದೇ ಹಣಕಾಸಿನ ಸಹಾಯ ಮಾಡಿಲ್ಲ. ನನ್ನ ಮತ್ತು ನನ್ನ ಹೆಂಡತಿ ಮತ್ತು ಅರ್ಜಿದಾರಳ ಜೀವನೋಪಾಯ ನನಗೆ ಬರುವ ವೃದ್ದಾಪ್ಯ ವೇತನದಿಂದ ನೋಡುಕೊಳ್ಳುತ್ತಿದ್ದೇನೆ. ಎದುರುದಾರ ಕೆ.ವಿ.ಜಿ. ಬ್ಯಾಂಕಿನಲ್ಲಿ ನೌಕರಿ ಮಾಡುತ್ತಿದ್ದಾನೆ. ಆತನಿಗೆ ತಿಂಗಳಿಗೆ ರೂ.40,000/- ಸಂಬಳ ಇರಬಹುದು. ನನ್ನ ಮತ್ತು ನನ್ನ ಹೆಂಡತಿ ಮತ್ತು ಅರ್ಜಿದಾರಳ ಜೀವನೋಪಾಯ ಮತ್ತು ಊಟ , ವಸತಿ , ಔಷಧಿ ಉಪಚಾರಕ್ಕಾಗಿ ಪ್ರತಿ ತಿಂಗಳು ರೂ.10,000/- ಖರ್ಚು ಇರುತ್ತದೆ. ಎದುರುದಾರನಿಗೆ ತಿಂಗಳು ರೂ.10,000/- ಕೊಡುವ ಶಕ್ತಿ ಇರುತ್ತದೆ. ಅರ್ಜಿದಾರಳಿಗೆ ಯಾವುದೇ ನೌಕರಿ ಇರುವುದಿಲ್ಲ. ಅರ್ಜಿದಾರಳಿಗೆ ಜೀವನಾಂಶ ಕೊಡಬೇಕು ಎಂದು ಕೇಳುತ್ತಿದ್ದೇನೆ. ನನಗೆ ಜಕ್ಕಲ್ಲಿ ಹೋಗುವ ರಸ್ತೆಯಲ್ಲಿ ಕೃಷ್ಣಾಪೂರ ಗ್ರಾಮದಲ್ಲಿ 2 ಎಕರೆ ಜಮೀನು ಇರುತ್ತದೆ. ಸದರಿ ಜಮೀನು ಒಣ ಬೇಸಾಯ ಜಮೀನು ಆಗಿದ್ದು, ಯಾವುದೇ ಆದಾಯ ಇಲ್ಲ.

**ಪಾಟೀ ಸವಾಲುಃ- ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ರೋಣ.**